(ಗೊಂದಲ)

ಅಧ್ಯಕ್ಷರು : ಹೌಸ್ ಲೀಡರ್ ಉತ್ತರ ಹೇಳುತ್ತಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಧ್ಯಾಹ್ನದ ಮೇಲೆ ಇದನ್ನು ತೆಗೆದುಕೊಳ್ಳಬಹುದು. 15 ನಿಮಿಷವೋ, 20 ನಿಮಿಷವೋ ಅರ್ಧ ಗಂಟೆಯೋ ತೆಗೆದುಕೊಳ್ಳಬಹುದು. ಅಷ್ಟರಲ್ಲಿ ನಾವು ಮಾಹಿತಿಗಳನ್ನು ಸಂಗ್ರಹಿಸುತ್ತೇವೆ. ಹಿಂದೆ ಏನೇನು ಕಳುಹಿಸಿದ್ದರು? ಇವತ್ತೇನು ಕಳುಹಿಸಿದ್ದೇವೆ ಎಂದು ನಾವು ಮಾಹಿತಿ ಸಂಗ್ರಹಿಸುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಇದನ್ನು 28ನೇ ತಾರೀಖಿನ ದಿವಸ ಕಳುಹಿಸಿರುವುದು. ನಾವು ಮೊದಲು ಪ್ರಸ್ತಾಪ ಮಾಡುತ್ತೇವೆ. ಅವರು ಮಾಹಿತಿ ಸಂಗ್ರಹ ಮಾಡಲಿ. ಆನಂತರ ಉತ್ತರ ಕೊಡಲಿ. ಇದು ಬಹಳ ಗಂಭೀರವಾದಂಥ ವಿಷಯ.

(ಗೊಂದಲ)

Mr. Speaker : Don't take down. Don't take down. ನಾನು ಯಾರಿಗೆಪರ್ಮಿಟ್ ಮಾಡುತ್ತೇನೋ ಅವರು ಹೇಳಿದ್ದು ಮಾತ್ರ ಬರೆದುಕೊಳ್ಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈ ಗುಪ್ತವಾರ್ತೆ ಇಲಾಖೆ ಕೂಡ ಮುಖ್ಯಮಂತ್ರಿಗಳ ಅಧೀನದಲ್ಲಿ ಇರತಕ್ಕಂಥಾದ್ದು. ಅವರ ನಾಲೆಡ್ಜ್‌ಗೆ ಬರದೇ ಈ ರೀತಿಯ ಜ್ಞಾಪನಾ ಪತ್ರಗಳನ್ನು ಕಳುಹಿಸುತ್ತಾರೋ ಹೇಗೆ? ಇದರ ಬಗ್ಗೆ ಮಾಹಿತಿ ತೆಗೆದುಕೊಳ್ಳುವಂಥಾದ್ದು ಏನು ಇದೆ?

ಅಧ್ಯಕ್ಷರು : ಲಂಚ್ ಅವರ್ ಆದಮೇಲೆ ಅಲೋ ಮಾಡುತ್ತೇನೆ ಎಂದು ಹೇಳಿದ್ದೇನಲ್ಲಾ ಎರಡು ಗಂಟೆಯಲ್ಲೇನೂ ರಾಜ್ಯ ಬಿದ್ದು ಹೋಗುತ್ತದೆಯೇ?

(ಗೊಂದಲ)

Mr. Speaker : Don't take down.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ನಾವೇನೂ ಚರ್ಚೆ ಬೇಡ ಎಂದು ಹೇಳುತ್ತಿಲ್ಲ, ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಅವರೇನು ಪ್ರಶ್ನೆಯನ್ನು ಎತ್ತಿದ್ದಾರೆ, ಅದಕ್ಕೆ ಉತ್ತರ ಕೊಡುವುದಕ್ಕೆ ನಾವು ಸಮರ್ಥರಿದ್ದೇವೆ. ಉತ್ತರವನ್ನು ಕೊಡುತ್ತೇವೆ. ಆದರೆ ಈಗ ನಾವು ನಮ್ಮ ಅಜೆಂಡಾ ಪ್ರಕಾರ ಹೋಗೋಣ. ಅಜೆಂಡಾ ಮುಗಿದಮೇಲೆ ಬೇಕಾದರೆ ಅವರು ಇದನ್ನು ಮಧ್ಯಾಹ್ನದ ಮೇಲೆ ತೆಗೆದುಕೊಳ್ಳಲಿ. ನಾವು ಮಾಹಿತಿ ಸಂಗ್ರಹಿಸುತ್ತೇವೆ. ಎಲ್ಲಾ ಸರ್ಕಾರಿ ಆಫೀಸ್ಗಳನ್ನೂ ನಾವು ಹುಡುಕುತ್ತೇವೆ. ಇದೇನು ನಾವು ಹೊಸದಾಗಿ ಮಾಡಿದ್ದೇವೋ, ಹಿಂದೆಯೂ ಇತ್ತೋ? ಇವತ್ತೇ ಸೃಷ್ಟಿ ಮಾಡಿದ್ದೇವೆಯೇ ಅಥವಾ ಕೇಂದ್ರ ಸರ್ಕಾರದಲ್ಲಿ ಏನು ಪದ್ಧತಿ ಇದೆ? ಅದನ್ನೆಲ್ಲಾ ನೋಡಿಕೊಂಡು, ಅದರ ಬಗ್ಗೆ ಸಮರ್ಪಕವಾಗಿ ಮಧ್ಯಾಹ್ನದ ಮೇಲೆ ನಾವು ಉತ್ತರವನ್ನು ಕೊಡುತ್ತೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಾವು ಈಗ ಚರ್ಚೆ ಪ್ರಾರಂಭ ಮಾಡುತ್ತೇವೆ. ಆಮೇಲೆ ಅವರು ಉತ್ತರ ಕೊಡಲಿ.

(ಗೊಂದಲ)

(ವಿರೋಧ ಪಕ್ಷದವರು ಧರಣಿ ನಡೆಸಲು ಬಾವಿಗೆ ಬಂದರು)